ಅಧಿಕೃತ ನಿರ್ಣಯ

ವಿಧಾನಸಭೆಯ ಪ್ರೇಕ್ಷಕರ ಗ್ಯಾಲರಿಯಿಂದ ಸ್ಲೋಗನ್‌ಗಳನ್ನು ಕೂಗಿ ಶಿಕ್ಷೆಗೆ ಒಳಗಾಗಿದ್ದ ವ್ಯಕ್ತಿಗಳ ಬಿಡುಗಡೆಯ ಬಗ್ಗೆ

ಶ್ರೀ ಡಿ. ಹೆಚ್. ಲಮಾಣಿ (ಸರಕಾರದ ಮುಖ್ಯ ಸಚೇತಕರು):- ಸನ್ಮಾನ್ಯ ಅಧ್ಯಕ್ಷರೇ, ಈ ಕೆಳಕಂಡ ಪ್ರಸ್ತಾವನೆಯನ್ನು ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ.

"ದಿನಾಂಕ 3.3.92 ರಂದು ಸದನದ ನಿಂದನೆ ಆಪಾದನೆ ಮೇರೆಗೆ ಮೂರು ದಿನಗಳ ಸೆರೆವಾಸದ ಶಿಕ್ಷೆಗೆ ಒಳಪಟ್ಟಿದ್ದ 1) ಪಿ.ತಿಪ್ಪಯ್ಯ ಬಿನ್ ಪೂಜಾ ವೆಂಕಟಯ್ಯ, (2) ಗಂಗಚೆನ್ನಯ್ಯ ಬಿನ್ ಬೈಲಯ್ಯ (3) ವೆಂಕಟೇಶ್ ಬಿನ್ ಶಣ್ಮುಗಯ್ಯ, ಅವರ ಶಿಕ್ಷೆಯನ್ನು ಈವರೆಗೆ ಅನುಭವಿಸಿದ್ದ ಶಿಕ್ಷೆಗೆ ಸೀಮಿತಗೊಳಿಸಿ, ಇಂದು ಅವರನ್ನು ಬಿಡುಗಡೆ ಮಾಡುವುದು" ಈ ನಿರ್ಣಯವನ್ನು ತಾವೆಲ್ಲರೂ ಸಹಮತದಿಂದ ಒಪ್ಪಿ ಕೊಳ್ಳಬೇಕೆಂದು ತಮ್ಮೆಲ್ಲರನ್ನು ಪ್ರಾರ್ಥಿಸುತ್ತೇನೆ.

ಅಧ್ಯಕ್ಷರು:- ಪ್ರಸ್ತಾಪನೆಯನ್ನು ಸಭೆಯ ಮುಂದೆ ಮಂಡಿಸಲಾಯಿತು ಹಾಗೂ ಈಗ ಪ್ರಸ್ತಾಪನೆಯನ್ನು ಸಭೆಯ ಮತಕ್ಕೆ ಹಾಕುತ್ತೇನೆ.

" ದಿನಾಂಕ 3-3-92 ರಂದು ಸದನದ ನಿಂದನೆ ಆಪಾದನೆ ಮೇರೆಗೆ ಮೂರು ದಿನಗಳ ಸೆರೆವಾಸದ ಶಿಕ್ಷೆಗೆ ಒಳಪಟ್ಟಿದ್ದ (1) ಪಿ. ತಿಪ್ಪಯ್ಯ ಬಿನ್ ಪೂಜಾ ವೆಂಕಟಯ್ಯ (2) ಗಂಗ ಚೆನ್ನಯ್ಯ ಬಿನ್ ಬೈಲಯ್ಯ (3) ವೆಂಕಟೇಶ್ ಬಿನ್ ಶಣ್ಮುಗಯ್ಯ ಅವರ ಶಿಕ್ಷೆಯನ್ನು ಈವರೆಗೆ ಅನುಭವಿಸಿದ್ದ ಶಿಕ್ಷೆಗೆ ಸೀಮಿತಗೊಳಿಸಿ ಇಂದು ಅವರನ್ನು ಬಿಡುಗಡೆ ಮಾಡುವುದು"

(ಪ್ರಸ್ತಾವನೆಯನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು)

ಅಧ್ಯಕ್ಷರು:- ಪ್ರಸ್ತಾವನೆ ಅಂಗೀಕೃತವಾಗಿದೆ ಅವರನ್ನು ಬಿಡುಗಡೆ ಮಾಡಬಹುದು.

ಬಡ್ಜೆಟ್ ಮಂಡನೆಗೆ ಮುಂಚೆ, ಬಡ್ಜೆಟ್ ಪ್ರತಿಗಳ ಬಹಿರಂಗ

ಶ್ರೀ ಡಿ. ಬಿ. ಚಂದ್ರೇಗೌಡ:- ಮಾನ್ಯ ಅಧ್ಯಕ್ಷರೇ, ನಾನು ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮಗಳ 145ನೇ ವಿಧಿಯ ಅನ್ವಯ ಕೊಟ್ಟಿರತಕ್ಕಂಥ ನಿರ್ಣಯದ ಮಹತ್ವವನ್ನು ಗಂಭೀರತೆಯನ್ನು ಮತ್ತು ಅಗತ್ಯತೆಯನ್ನು ಪರಿಪೂರ್ಣವಾಗಿ ತಾವು ಮನಗಂಡು ಅದರ ಹಿಂದೆ ಇದ್ದಂಥ ಅನೇಕ ಅನಿಷ್ಟ ಅಗತ್ಯತೆಗಳನ್ನು ಪೂರೈಸತಕ್ಕಂಥ ಸ್ಥಿತಿ ಇಲ್ಲ ಎನ್ನತಕ್ಕಂಥಾದ್ದನ್ನು ಗಮನಿಸಿ ನನಗೆ ಈ ಒಂದು ನಿರ್ಣಯ ಮಂಡನೆ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ. ಅದಕ್ಕಾಗಿ ನಾನು ತಮ್ಮನ್ನು ನನ್ನ ಮತಿಯಿಂದ ಎಲ್ಲಾ ವಿರೋಧ ಪಕ್ಷಗಳ ಮತಿಯಿಂದ ಅಭಿನಂದನೆ ಮಾಡುತ್ತೇನೆ. ಮಾಡುವ ಜೊತೆಗೆ ಈ ಒಂದು ನಿರ್ಣಯದ ಮಹತ್ವವನ್ನು ಸಭೆಯ ಮೂಲಕ ಸಾರ್ವಜನಿಕರ ಗಮನಕ್ಕೆ ತರುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ. ನಾನು ಇಂತಹ ಒಂದು ಮಹತ್ತರವಾದ ನಿರ್ಣಯವನ್ನು ತರುವ ಮುನ್ನ ಹತ್ತಾರು ಬಾರಿ ಆಲೋಚನೆ ಮಾಡಿದ್ದೇನೆ. ನನ್ನ ತಿಳುವಳಿಕೆಯ ಇತಿಮಿತಿಯ ಒಳಗೆ ಎಷ್ಟೆಷ್ಟನ್ನು ತಿಳಿದುಕೊಳ್ಳಬೇಕೋ ಯಾರ ಯಾರನ್ನು ಸಂಪರ್ಕಿಸಬೇಕೋ ಅಷ್ಟು ಸಂಪರ್ಕವನ್ನು ಮಾಡುವುದಕ್ಕೆ ಪ್ರಯತ್ನ ಮಾಡಿ ಈ ಒಂದು ಮಹತ್ತರವಾದ ನಿರ್ಣಯವನ್ನು ಸಭೆಯ ಮುಂದೆ ಮಂಡನೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ. ಈ ಸಭೆಗೆ ಈ ನಿರ್ಣಯವನ್ನು ಒಪ್ಪಿಕೊಳ್ಳುವುದಕ್ಕೆ ಮುನ್ನ ನಾನು ಪ್ರಾಸ್ತಾವಿಕವಾಗಿ ಆಗಲೇ ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದೇನೆ. ಪುನಃ ಅದನ್ನು ಪ್ರಸ್ತಾಪ ಮಾಡತಕ್ಕಂಥ ಅವಶ್ಯಕತೆ ಇಲ್ಲ ಎಂದು ನಾನು ಭಾವನೆ ಮಾಡಿರುತ್ತೇನೆ. ನಾವು ಮುಖ್ಯವಾಗಿ ನಮ್ಮ ನಿಯಮಗಳ ವ್ಯಾಪ್ತಿಯಲ್ಲಿ ರಾಜ್ಯಾಂಗದ ವ್ಯಾಪ್ತಿಯಲ್ಲಿ ಜನತಂತ್ರವನ್ನು ಒಪ್ಪಿಕೊಂಡು, ಈ ದೇಶಕ್ಕೆ 1950ನೇ ಇಸವಿಯ ಜನವರಿ 26ನೇ ತಾರೀಖು ಕೊಟ್ಟಂಥ ರಾಜ್ಯಾಂಗದ ವ್ಯಾಪ್ತಿಯೊಳಗೆ ಕೆಲಸ ಮಾಡತಕ್ಕಂಥ ಮಾತನ್ನು ಈ ದೇಶದ ಜನಕ್ಕೆ ಕೊಟ್ಟಿದ್ದೇವೆ. ಹಾಗೆ ಎಲ್ಲಾ ವಿಧಿ ವಿಧಾನಗಳನ್ನು ನಾವು ಅನುಸರಿಸಿಕೊಂಡು ಈ ಶಾಸನಸಭೆಯಲ್ಲಿ ಮತ್ತು ನಾವು ಸದಸ್ಯರಾಗಿ ಕೆಲಸ ಮಾಡತಕ್ಕಂಥ ವಿವಿಧ ಹಂತಗಳಲ್ಲಿ ಈ ಕಾರ್ಯವನ್ನು ಮಾಡಿಕೊಂಡು ಬಂದಿದ್ದೇವೆ. ಅದಕ್ಕಾಗಿ ವ್ಯಕ್ತಿ ವಿಚಲಿತನಾಗಬಹುದು. ಆದುದರಿಂದ ಅಂತಹ ಚಂಚಲತೆಯನ್ನು ಹಿಡಿತದಲ್ಲಿಟ್ಟುಕೊಳ್ಳುವುದಕ್ಕೆ, ಪತೋಟಿಯಲ್ಲಿಟ್ಟು ಕೊಳ್ಳುವುದಕ್ಕೆ ನಮ್ಮದೇ ಆದ ಶಾಸನಗಳನ್ನು ಮಾಡಿಕೊಂಡಿರುತ್ತೇವೆ. ಈ ಶಾಸನಗಳ ವ್ಯಾಪ್ತಿಯಲ್ಲಿ ಅಪರಾಧ ಮಾಡಿದರೆ ಶಿಕ್ಷೆ ಕೂಡಾ